ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 152,50,27,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಉಪಾಧ್ಯಕ್ಷಿಣಿಯವರು:- ಈಗ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ನಂಜನಗೂಡು ದಳವಾಯಿ ಹಿರಿಯ ಪ್ರಾಥಮಿಕ ಶಾಲೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 421 (2311)

ಶ್ರೀ ಎಂ.ಮಹದೇವ (ನಂಜನಗೂಡು):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ನಂಜನಗೂಡು ದಳವಾಯಿ ಹಿರಿಯ ಪ್ರಾಥ'ಮಿಕ ಶಾಲೆಯು 100 ವರ್ಷಗಳಷ್ಟು ಹಳೆಯದಾಗಿದ್ದು ಇದನ್ನು 1984-85ನೇ ಸಾಲಿನಲ್ಲಿ ಕೆಡವಲಾಗಿರುವುದು ನಿಜವೇ?

(ಆ) ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಗಳು ಮುರ್ನಾಲ್ಕು ಶಾಲೆಗಳಿಗೆ ವರ್ಗಾವಣೆಯಾಗಿ ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

(ಇ) ಕಟ್ಟಡ ನಿರ್ಮಾಣವನ್ನು ಶೀಘ್ರದಲ್ಲಿಯೇ ಮುಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

(ಈ) ಸದರಿ ಕಾಮಗಾರಿಗೆ ನಿಗದಿತ ಅನುದಾನ ನೀಡಿದೆಯೇ ಇಲ್ಲದಿದ್ದಲ್ಲಿ ನೀಡಲಾಗುವುದೇ?

ಶ್ರಿ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಅ) ಹೌದು

(ಆ) ಹೌದು

(ಇ) ಈ ಕಟ್ಟಡ ನಿರ್ಮಾಣಕ್ಕೆ 1992-93ರಲ್ಲಿ ರೂ. 10.00 ಲಕ್ಷಗಳ ಅನುದಾನವನ್ನು ಒದಗಿಸಿಕೊಂಡು ಪೂರ್ಣಗೊಳಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(ಈ) ಈವರೆಗೆ ಈ ಕಟ್ಟಡದ ಬಗ್ಗೆ ಅನುದಾನವನ್ನು ನೀಡಿರುವುದಿಲ್ಲ. ಈಗ ಈ ಕಟ್ಟಡಕ್ಕಾಗಿ 1992-93ರ ಆಯವ್ಯಯದಲ್ಲಿ ರೂ. 10.00 ಲಕ್ಷಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಮಹದೇವ್:- ಮಾನ್ಯ ಉಪಾಧ್ಯಕ್ಷರೇ, ನಂಜನಗೂಡಿನಲ್ಲಿರುವ ದಳವಾಯಿ ಕಟ್ಟಡ ಸುಮಾರು ನೂರು ವರ್ಷಗಳಷ್ಟು ಹಳೆಯದು. ಅದು ಬಹಳ ದೊಡ್ಡದಾದ ಕಟ್ಟಡ. ಆ ಕಟ್ಟಡವನ್ನು ಕೆಡವಿ ಇಲ್ಲಿಯ ತನಕ ಏಳು ವರ್ಷವಾಗಿದೆ. ಆ ಶಾಲೆಯಲ್ಲಿ ಸುಮಾರು ಎರಡು ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಳೆದ ಏಳು ವರ್ಷಗಳಿಂದ ಕಟ್ಟಡವನ್ನು ಕೆಡವಿರುವುದರಿಂದ ಆ ಮಕ್ಕಳಿಗೆ ಸ್ಥಳಾವಕಾಶ ಇಲ್ಲ. ಅವರು ಈಗ ಬೀದಿಯಲ್ಲಿ ಓದುವಂಥ ಪರಿಸ್ಥಿತಿ ಬಂದಿದೆ. ಮತ್ತೆ, ಅಲ್ಲಿ ಕಟ್ಟಡವನ್ನು ಕೆಡವುವಂಥ ಕಾಲದಲ್ಲಿ ಸುಮಾರು ಹತ್ತು-ಹದಿನೈದು ಲಕ್ಷ ರೂಪಾಯಿಗಳಷ್ಟು ಸಾಮಗ್ರಿಗಳು ಇದ್ದವು. ಆ ಸಾಮಗ್ರಿಗಳ ದುರುಪಯೋಗವಾಗಿದೆ. ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಕಟ್ಟಡ ಕೆಡವಿದಂಥ ಕಾಲದಲ್ಲಿ ಹತ್ತು-ಹದಿನೈದು ಲಕ್ಷ ರೂಪಾಯಿ ಬೆಲೆಬಾಳುವ ಟೀಕ್ ಮತ್ತು ಬೀಟೆ ಮರಗಳ ಸಾಮಗ್ರಿಗಳಿದ್ದವು. ಅದರಲ್ಲಿ 50 ಸಾವಿರ ರೂಪಾಯಿಗಳ ಸಾಮಗ್ರಿಗಳು ಇಲ್ಲ. ಕಟ್ಟಡದಲ್ಲಿದ್ದಂಥ ಸಾಮಾನುಗಳನ್ನು ಅಧಿಕಾರಿಗಳು ತಮ್ಮ ಮನೆಕಟ್ಟಲಿಕ್ಕೆ ಉಪಯೋಗಿಸಿಕೊಂಡಿದ್ದಾರೆ. ಇವತ್ತು ಸಾಮಾನ್ಯವಾಗಿ ಒಂದು ಶಾಲೆ ಕಟ್ಟಡ ಕಟ್ಟಬೇಕಾದರೆ ಡೊನೇಷನ್ ಕೊಟ್ಟು ಸಹಾಯ ಮಾಡುತ್ತಾರೆ. ಆದರೆ ಕಟ್ಟಡವನ್ನು ಕೆಡವಿದಾಗ ಅಲ್ಲಿದ್ದ ಸಾಮಾನುಗಳನ್ನು

ತಮ್ಮ ಮನೆಗಳಿಗಾಗಿ ಸ್ವಂತಕ್ಕೆ ಉಪಯೋಗ ಮಾಡಿಕೊಂಡಿರುವ ನಿದರ್ಶನ ಇದರಿಂದ ಕಾಣಿಸುತ್ತಿದೆ. ಕಳೆದ ಏಳು ವರ್ಷಗಳಿಂದ ನಮ್ಮ ನಂಜನಗೂಡು ಕ್ಷೇತ್ರದಲ್ಲಿ, ಸುಮಾರು ಎರಡು ಸಾವಿರ ಶಾಲಾ ಮಕ್ಕಳು ಬೀದಿಯಲ್ಲಿ ಅಭ್ಯಾಸ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ. 1984ನೇ ಸಾಲಿನಲ್ಲಿ ಕಟ್ಟಡವನ್ನು ಕೆಡವಿದ್ದಾರೆಂಬುದನ್ನು ಒಪ್ಪಿದ್ದೀರಿ, ಇಲ್ಲಿಯವರೆಗೂ ಆ ಕಟ್ಟಡದ ಪುನರ್‌ನಿರ್ಮಾಣ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ, ಹಾಗಾದರೆ ಯಾವಾಗ ಕ್ರಮ ತೆಗೆದುಕೊಳ್ಳುತ್ತದೆ, ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಬೇಕು ಮತ್ತೆ 1992-93ನೇ ಸಾಲಿಗೆ 10 ಲಕ್ಷ ರೂಪಾಯಿಗಳ ಅನುದಾನ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಕಟ್ಟಡದ ವೆಚ್ಚ ಎಷ್ಟಾಗುತ್ತದೆ, ನೀವು ಬರೀ 10 ಲಕ್ಷ ರೂಪಾಯಿ ಕೊಟ್ಟರೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಈ ಕಟ್ಟಡಕ್ಕಾಗಿ 50 ಲಕ್ಷ ರೂಪಾಯಿಗಳ ಅನುದಾನ ಕೊಟ್ಟರೆ, ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಅಂದಾಜು ವೆಚ್ಚ ಎಷ್ಟಾಗುತ್ತದೆ ಎಂಬುದು ನನಗೆ ಗೊತ್ತಿಲ್ಲ. 1984ನೇ ಸಾಲಿನಲ್ಲಿ ತಾವು ಮಂಜೂರ್ಮಾಡಿದಂಥ ಅಂದಾಜುವೆಚ್ಚ ಎಷ್ಟಾಗಿತ್ತೋ ಗೊತ್ತಿಲ್ಲ. ಆದುದರಿಂದ ಈ ಅಂದಾಜು ವೆಚ್ಚ ಎಷ್ಟಾಗುತ್ತದೆ ಎಂಬುದನ್ನು ತಿಳಿಸಬೇಕು. ಏಕೆಂದರೆ, ಇವತ್ತಿನ ರೇಟಿಗೂ, ಆವತ್ತಿನ ರೇಟಿಗೂ ನೋಡಿದಾಗ ಇವತ್ತು ಡಬಲ್ ಆಗಿರಬಹುದು. ಆದುದರಿಂದ ಕಟ್ಟಡವನ್ನು ಕಟ್ಟುವುದಕ್ಕೆ ತಕ್ಷಣ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು. ಈಗಾಗಲೇ ಸಾಕಷ್ಟು ವಿಳಂಬವಾಗಿದೆ. ಮಕ್ಕಳು ಅನಾಥರಾಗಿ, ಶಾಲೆ ಇಲ್ಲದೆ, ಸ್ಥಳಾವಕಾಶ ಇಲ್ಲದೆ, ಬೀದಿ ಬೀದಿಯಲ್ಲಿ ಹೋಗುವಂಥ ಪರಿಸ್ಥಿತಿ ಬಂದಿದೆ. ನಾವು ಬಜಾರ್ ಪೇಟೆಯಲ್ಲಿ ಓಡಾಡಿದರೆ, ಜನಗಳು ನಮ್ಮ ಮೇಲೆ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ನಾವು ಸ್ಥಳಾವಕಾಶವನ್ನು ಮಾಡಿಕೊಡುತ್ತೇವೆ. ತಕ್ಷಣ ಕಟ್ಟಡವನ್ನು ಮಾಡಿಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟು, ಕೊಟ್ಟು ಸಾಕಾಗಿದೆ. ಆದುದರಿಂದ, ತಮ್ಮಿಂದ ಸ್ಪಷ್ಟವಾದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ:- ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಅದು ಸ್ವಲ್ಪ ನಿರ್ಲಕ್ಷ್ಯವಾಗಿದೆ. ಆದರೆ, ಪರಿಸ್ಥಿತಿ ಏನಾಗಿದೆ ಎಂದರೆ, ತಮಗೆ ಗೊತ್ತಿದೆ. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಯವರೆಗೆ ಈ ಕಾರ್ಯಕ್ರಮವನ್ನು ಜಿಲ್ಲಾಪರಿಷತ್ತಿನಿಂದ ತೆಗೆದುಕೊಳ್ಳಬೇಕು. ಜಿಲ್ಲಾಪರಿಷತ್ತಿನವರು ಇದಕ್ಕೆ ಕೆಲವು ಸಾರಿ ಸರಿಯಾಗಿ ಆದ್ಯತೆ ಕೊಡದೇ, ಇತ್ತೀಚಿನ ವರ್ಷಗಳಲ್ಲಿ, ಈ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಇನ್ನು ಮುಂದೆ ಏನು ಮಾಡಬೇಕು, ಜಿಲ್ಲಾಪರಿಷತ್ ಸರಿಯಾಗಿ ಆದ್ಯತೆ ಕೊಡದೇ ಶಾಲಾ ಕಟ್ಟಡಗಳನ್ನು ಕಟ್ಟದೇ ಇದ್ದರೆ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮುಂದೆ ಬರತಕ್ಕ ಜಿಲ್ಲಾ ಪರಿಷತ್ತಿನ ತಿದ್ದುಪಡಿ ಏನಿದೆ ಅದರ ಬಗ್ಗೆ ಇಡೀ ಸದನ ವಿಶೇಷವಾಗಿ ಆಲೋಚನೆ ಮಾಡಬೇಕಾಗುತ್ತದೆ. ಆದರೂ ಕೂಡ ನಾವು ಜಿಲ್ಲಾಪರಿಷತ್ತಿಗೆ ಆದ್ಯತೆ ಕೊಟ್ಟು ಹಣವನ್ನು ಒದಗಿಸಿ ಕಟ್ಟಡಗಳನ್ನು ಕಟ್ಟುವುದಿದ್ದರೂ ಕೂಡ, ಸರ್ಕಾರ ನೇರವಾಗಿ ಈ ಬಗ್ಗೆ ಕೆಲವು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈಗಾಗಲೇ 10 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಸರ್ಕಾರ ಆಲೋಚನೆ ಮಾಡಿದೆ. ಈಗಾಗಲೇ ಹಣಕಾಸಿನ ಇಲಾಖೆಯವರಿಗೂ ಸಹ 10 ಲಕ್ಷ ತಕ್ಷಣ ಬಿಡುಗಡೆ ಮಾಡಬೇಕೆಂದು ಹೇಳಿದ್ದೇವೆ. ಹಣ ಕೆಲವೇ ದಿವಸಗಳಲ್ಲಿ ಬಿಡುಗಡೆಯಾಗುತ್ತದೆ. ಈ ಹಣದಿಂದ ತಕ್ಷಣ ಕೆಲವು ಕಟ್ಟಡಗಳನ್ನು ತೆಗೆದುಕೊಳ್ಳುತ್ತೇವೆ. ತಾವು ಹೇಳಿದ ಪ್ರಕಾರ, ಒಟ್ಟು ಎಷ್ಟು ಕೊಠಡಿಗಳು ಬೇಕು, ಯಾವ ರೀತಿಯಲ್ಲಿ ಹಣವನ್ನು ಡಿಸ್ಟ್ರಿಕ್ಟ್ ಸೆಕ್ಟಾರ್‌ನಿಂದ ಒದಗಿಸುವುದಕ್ಕೆ ಸಾಧ್ಯ ಎಂಬ ಬಗ್ಗೆ ಪ್ರತ್ಯೇಕವಾಗಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಹದೇವ್:- 1984-85ನೇ ಸಾಲಿನಲ್ಲಿ ಇದಕ್ಕೆ ಎಷ್ಟು ಮೊತ್ತ ಮಂಜೂರಾಗಿತ್ತು. ಈಗ ಈ ಶಾಲಾ ಕಟ್ಟಡಕ್ಕೆ ತಾವು ಎಷ್ಟು ಬಿಡುಗಡೆ ಮಾಡುತ್ತೀರೆಂಬುದನ್ನು ತಿಳಿಸಬೇಕು. ಎರಡನೆಯದು, ಈ ದಳವಾಯಿ ಕಟ್ಟಡದ ಮಹಾರಾಜರ ಕಾಲದಲ್ಲಿ ಕಟ್ಟಿದ್ದು ಇಲ್ಲಿ ಬೆಲೆ ಬಾಳುವಂಥ ಟೀಕ್‌ವುಡ್, ಬೀಟೆ ಮರಗಳು ಬಹಳ ಇವೆ. ಇವತ್ತು ಯಾರೋ ಒಬ್ಬರು ಕಂಟ್ರಾಕ್ಟರು ನೋಡಿ ಆ ಕಟ್ಟಡದ ಮರದ ಸಾಮಾನುಗಳನ್ನು ನನಗೆ

ಕೊಡಿ, 10-15 ಲಕ್ಷ ರೂ.ಗಳನ್ನು ಕೊಟ್ಟು ಆ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತೇನೆಂದು ಹೇಳಿದರು. ಮತ್ತು ಇದರಿಂದ ಈ ಕಟ್ಟಡ ಕಟ್ಟಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ ಎಂದು ಹೇಳಿದರು. ನನಗೆ ಬಂದಿರತಕ್ಕ ಸುದ್ದಿ ಪ್ರಕಾರ ಅಧಿಕಾರಿಗಳು ಮತ್ತು ಇತರೆಯವರು ಇದನ್ನು ದುರುಪಯೋಗ ಮಾಡಿಕೊಂಡು ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಇವತ್ತಿಗೂ ಕೆಡದಂಥ ಸುಮಾರು 50 ಸಾವಿರ ರೂಪಾಯಿಗಳ ಸಾಮಾನುಗಳು. ಅಲ್ಲಿ ಕಾಣುತ್ತಾ ಇಲ್ಲ. ಇದರ ಬಗ್ಗೆ ಸಮಗ್ರ ತನಿಖೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆಲ್ಲಿನ ಈ ಮರದ ಸಾಮಾನುಗಳು ಏನಾಗಿವೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಯಾರು ಯಾರೋ ತೆಗೆದುಕೊಂಡು ಹೋಗಿದ್ದಾರೆ, ಆ ಕಟ್ಟಡವನ್ನು ಕೆಡವಿದ ಕಾಲದಲ್ಲಿ ಯಾರು ಯಾರೋ ಜವಾಬ್ದಾರಿ ತೆಗೆದುಕೊಂಡಿದ್ದರು. ಯಾರ ಹತ್ತಿರ ಲೆಕ್ಕ ಇದೆ ಎಂಬ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ:- ಕಟ್ಟಡ ಕೆಡವಿದಾಗ ಇದ್ದ ಮರಮುಟ್ಟುಗಳು ಏನಾಗಿವೆ ಎಂಬ ಬಗ್ಗೆ ಪ್ರತ್ಯೇಕವಾದ ತನಿಖೆ ಮಾಡಿಸುತ್ತೇನೆ. ಪ್ರಶ್ನೆ ಏನೆಂದರೆ, ಎಷ್ಟು ಹಣ ಒದಗಿಸಿದೆ ಎಂದು ಹೇಳಿದರೆ, ತಮಗೂ ಗೊತ್ತಿದೆ, ಜಿಲ್ಲಾಪರಿಷತ್ತಿನ ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಹಣ ಒದಗಿಸಬೇಕು, ಆದರೆ ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಇದಕ್ಕೆ ಹಣ ಒದಗಿಸಲೇ ಇಲ್ಲ, ಅದೇ ಸಮಸ್ಯೆ ಬಂದಿರುವುದು. ಈಗ ಸ್ಟೇಟ್ ಸೆಕ್ಟಾರ್‌ನಿಂದಲೇ, ಸೇವಿಂಗ್ಸ್‌ನಲ್ಲಿ ತಕ್ಷಣ, ಇದಕ್ಕಾಗಿ 10 ಲಕ್ಷ ಬಿಡುಗಡೆ ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಮುಂದೆ ಬರತಕ್ಕ 1992-93ನೇ ಸಾಲಿನಲ್ಲಿ ಇದಕ್ಕೆ ವಿಶೇಷವಾದ ಆದ್ಯತೆಯನ್ನು ಕೊಟ್ಟು ಹೆಚ್ಚು ಹಣವನ್ನು ಒದಗಿಸಿ, ಕಾರ್ಯಕ್ರಮ ತ್ವರಿತವಾಗಿ ಆಗುವಂತೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

(ಶ್ರೀ ಕೆ.ಬಿ.ಕೋಳಿವಾಡ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಎಂ.ಮಹದೇವ್:- ಆ ಜಾಗದಲ್ಲಿದ್ದ ಕಟ್ಟಡ ಕೆಡವಲಾಗಿದೆ. ಅಲ್ಲಿ ಕಾಲು ಎಕರೆ ಜಮೀನು ಪಟ್ಟಣದ ಮಧ್ಯಪ್ರದೇಶದಲ್ಲಿದೆ. ಆ ಕಟ್ಟಡ ಕೆಡವಿದ ನಂತರ ಖಾಲಿ ನಿವೇಶನ ಏನು ಇದೆ, ಅದನ್ನು ಅಕ್ಕಪಕ್ಕದವರು ಎನ್‌ಕ್ರೋಚ್‌ಮೆಂಟ್ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಜಿಲ್ಲಾಪರಿಷತ್‌ನವರೂ ಕಾಳಜಿ ವಹಿಸಲಿಲ್ಲ ಹಾಗೂ ಕ್ರಮ ತೆಗೆದುಕೊಂಡಿಲ್ಲ.

ಚೇರ್ಮನ್:- ಡೀಟೈಲ್ಸ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಮಹದೇವ್:- ಏತಕ್ಕೆಂದರೆ ಇದು ಪ್ರಮುಖವಾದ ವಿಚಾರ. ಅದಕ್ಕಾಗಿ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಅಲ್ಲಿ ಎರಡುಮೂರು ಸಾವಿರ ಮಕ್ಕಳು ಬಹಳ ತೊಂದರೆಯಲ್ಲಿದ್ದಾರೆ. ಮಾನ್ಯ ಮಂತ್ರಿಗಳಿಗೆ ಕಾಳಜಿ ಇರುವುದರಿಂದ ಅವರ ಗಮನವನ್ನು ಈ ಸದನದಲ್ಲಿ ಸೆಳೆಯುತ್ತಿದ್ದೇನೆ. ಅದು ಬಹಳ ಬೆಲೆ ಬಾಳತಕ್ಕ ಜಮೀನು. ನಂಜನಗೂಡು ಪಟ್ಟಣದ ಮಧ್ಯಭಾಗದಲ್ಲಿರುವ ಜಮೀನು. ಎನ್‌ಕ್ರೋಚ್ ಆಗುತ್ತಿದೆ. ಇದನ್ನು ತಪ್ಪಿಸಬೇಕು.

ಚೇರ್ಮನ್:- ಎಲ್ಲಾ ವಿಚಾರಣೆ ಮಾಡಿಸುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ:- ಇದೊಂದು ವಿಚಾರ ಆಗ ಹೇಳಿರಲಿಲ್ಲ. ಈಗ ಹೇಳಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ. ಏನು ಕಾಲು ಎಕರೆ ಜಾಗ ಇದೆ ಅದರ ಬಗ್ಗೆ ತಕ್ಷಣ ಫೆನ್ಸಿಂಗ್ ಮಾಡಿ ಅದನ್ನು ರಕ್ಷಣೆ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನೂ ತಕ್ಷಣ ತೆಗೆದುಕೊಳ್ಳುತ್ತೇನೆ.

ಚೇರ್ಮನ್:- ಈಗ ಮಾನ್ಯ ಆಹಾರ ಮಂತ್ರಿಗಳು ಕೌನ್ಸಿಲ್‌ಗೆ ಹೋಗುವ ಜರೂರು ಇರುವುದರಿಂದ ಮಾನ್ಯ ಅಂಜನಮೂರ್ತಿಯವರು ತಮ್ಮ ಪ್ರಶ್ನೆ ಕೇಳಬೇಕು.

ವಿಷಯ:- ಪರಿಶಿಷ್ಟ ಜಾತಿ/ವರ್ಗದ ಹ್ಯಾಮಲೆಟ್ ಹಾಗೂ ಬಸ್ತಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 438 (2242)

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ